**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ .732/2012**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - | ಪ್ರಶಾಂತ್ ಎಂ ವಿ | **ಚಾ.ಸಾ.-36** |
| **ತಂದೆ /ಗಂಡನ ಹೆಸರು** | - | ಮಹದೇವು | **ಫ್ರಾ.ಸಾ.-4** |
| **ವಯಸ್ಸು** | - | 47 ವರ್ಷ | |
| **ಉದ್ಯೋಗ** | - | ಡಿ ವೈ ಎಸ್ ಪಿ ಸಿ ಐ ಡಿ ಬೆಂಗಳೂರು | |
| **ವಾಸ ಸ್ಥಳ** | - | ಬೆಂಗಳೂರು | |

ದಿನಾಂಕಃ 23-06-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಕಲಂಃ 299 ದಂ ಪ್ರ ಸಂಹಿತೆ ಕಲಂರಡಿಯಲ್ಲಿ**

ನಾನು ಮಾರ್ಚ್ 2009 ರಿಂದ ಸೆಪ್ಟಂಬರ್ -2012 ರವರೆಗೆ ಮದ್ದೂರು ವೃತ್ತದಲ್ಲಿ ವೃತ್ತ ನಿರೀಕ್ಷರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 21.04.2012 ರಂದು ನಾನು ಈ ಪ್ರಕರಣದ ಕಡತವನ್ನು ಚಾಸಾ-35 ರವರಿಂದ ಪಡೆದು ಪರಿಶೀಲಿಸಿರುತ್ತೆನೆ. ತನಿಖೆ ಮುಂದುವರೆಸಿ, ದಿಃ 03-05-2012 ರಂದು ಈ ಪ್ರಕರಣದ ಆರೋಪಿ ಹಾಗೂ ಮಾಲುಗಳನ್ನು ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ ಮೊ ಸಂಖ್ಯೆ 104/2012 ರಲ್ಲಿ ಪತ್ತೇಯಾಗಿರುವುದು ತಿಳಿದು ಬಂದಿರುತ್ತದೆ. ದಿಃ 07-06-2012 ರಂದು ನಂಜನಗೂಡು ಗ್ರಾಮಾಂತರ ನಿರೀಕ್ಷಕರು ಮೊ ಸಂಖ್ಯೆ 104/2012 ರಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದ ದಾಖಲಾತಿಗಳು ಹಾಗೂ ಅಮಾನತ್ತುಪಡಿಸಿಕೊಂಡಿದ್ದ 10 ಗ್ರಾಂ ತೂಕದ 8 ಇಂಚು ಉದ್ದವಿರುವಂತಹ ಅಂಜಲಿ ಕಟಿಂಗ್ ಡಿಸೈನ್ ವಿರುವ ಒಂದು ಚಿನ್ನದ ಚೈನ್ ನ್ನು ವರ್ಗಾವಣೆ ನೀಡಿದ್ದನ್ನು ಪಡೆದು ಚಿನ್ನದ ಚೈನ್ ನ್ನು ಮಾಲು ಪಟ್ಟಿ ನಂಃ 175/2012 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಆರೋಪಿತರ ವಿರುದ್ಧ ಆರೋಪ ಸಾಬೀತಾದ

ಕಾರಣ ಆರೋಪಿತರ ವಿರುದ್ದ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ , ಮದ್ದೂರು.